ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
<u>ಸಿ.ಸಿ.1245/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗಣೇಶ್ ಎಸ್.ಜಿ. | ಪಿ.ಡಬ್ಯೂ.3 |
| ತಂದೆಯ ಹೆಸರು | : | ಲೇಟ್ ಗೋವಿಂದಪ್ಪ | ಸಿ.ಡಬ್ಯೂ.3 |
| ವಯಸ್ಸು | : | 35 ವರ್ಷ | |
| ವೃತ್ತಿ | : | ಎಸ್.ಡಿ.ಎ, ಐ.ಡಿ.ಎಸ್.ಜಿ. ಕಾಲೇಜು | |
| ವಾಸ | : | ಚಿಕ್ಕಮಗಳೂರು | |

<u>ದಿನಾಂಕಃ 24-02-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-</u>

ನಾನು ಕಳೆದ 13 ವರ್ಷಗಳಿಂದ ಚಿಕ್ಕಮಗಳೂರಿನ ಐ.ಡಿ.ಎಸ್.ಜಿ ಕಾಲೇಜಿನಲ್ಲಿ ದ್ವಿತಿಯ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

4 ಜನ ಆರೋಪಿತರನ್ನ ದಿಃ16.09.2019 ರಂದು ಘಟನೆ ನಡೆಯಿತು ಎನ್ನಲಾದ ಸ್ಥಳದ ಹತ್ತಿರ ನೋಡಿದ್ದೇನೆ, ಸಾಕ್ಷಿ ಮುಂದುವರಿದು 4 ಜನರ ಪೈಕಿ ಒಬ್ಬರು ಮಾತ್ರ ಸಿಕ್ಕಿದರು ಇನ್ನು ಮೂರು ಜನ ಓಡಿ ಹೋದರು ಎನ್ನುತ್ತಾರೆ. ಚಾಸಾ-2 ರವರು ನಮ್ಮ ಕಾಲೇಜಿನ ಪ್ರಾಂಶುಪಾಲರು. ಚಾಸಾ-4 ರವರು ನಮ್ಮ ಕಾಲೇಜಿನ ಜವಾನ. ದಿಃ16.09.2019 ರಂದು ಮಧ್ಯಾಹ್ನಃ03.30 ಗಂಟೆಗೆ ನಾನು ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆಗ ಪೊಲೀಸರು ಚಾಸಾ-2 ರವರಿಗೆ ಫೋನ್ ಕರೆ ಮಾಡಿ ಗಾಂಜಾ ದಾಳಿ ಇದೆ ಪತ್ರಾಂಕಿತ ಅಧಿಕಾರಿಯಾಗಿ

ಭಾಗವಹಿಸಿ ಮತ್ತು ನಿಮ್ಮ ಸಿಬ್ಬಂದಿಗಳ ಪೈಕಿ ಇಬ್ಬರನ್ನ ಪಂಚಸಾಕ್ಷಿಗಳಾಗಿ ಕಳುಹಿಸಿಕೊಡಿ ಎಂದು ತಿಳಿಸಿದರು. ಆ ಮೇರೆಗೆ ಚಾಸಾ-2 ರವರು ನನಗೆ ಮತ್ತು ಚಾಸಾ-4 ರವರಿಗೆ ಮಹಜರ್ ಗೆ ಸಹಕರಿಸುವಂತೆ ಹೇಳಿದರು. ಆ ಮೇರೆಗೆ ನಾನು, ಚಾಸಾ-2 ಮತ್ತು ಚಾಸಾ-4 ರವರು ಮಧ್ಯಾಹ್ನಃ03.45 ಗಂಟೆಗೆ ನಗರ ಪೊಲೀಸ್ ಠಾಣೆ ಬಳಿ ಬಂದೆವು. ಸದರಿ ಸ್ಥಳದಲ್ಲಿ ಪೊಲೀಸರು ನನಗೆ ಮತ್ತು ಚಾಸಾ-4 ರವರಿಗೆ ನೋಟೀಸ್ ಜಾರಿ ಮಾಡಿದರು. ಸಾಕ್ಷಿಗೆ ನೋಟೀಸ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಚಾಸಾ-2 ರವರ ಬಳಿ ದಾಳಿಗೆ ಭಾಗವಹಿಸಿದ್ದ ಸಿಬ್ಬಂದಿಗಳು ಮತ್ತು ಜೀಪ್ ಗಳನ್ನ ಶೋಧನೆ ಮಾಡುವಂತೆ ಕೇಳಿಕೊಂಡರು. ಆಗ ಚಾಸಾ-2 ರವರು ನನ್ನ ಸಮಕ್ಷಮದಲ್ಲಿ 2 ಜೀಪ್ ಗಳು ಮತ್ತು ದಾಳಿಗೆ ಭಾಗವಹಿಸಲು ತಯಾರಾಗಿದ್ದ ಪೊಲೀಸ್ ಸಿಬ್ಬಂದಿಗಳನ್ನ ಶೋಧನೆ ಮಾಡಿದರು. ಈ ಸಂಬಂಧ ಮಹಜರ್ ಬರೆಯಲಾಯಿತು. ಸದರಿ ಮಹಜರ್ ಗೆ ನಾನು, ಚಾಸಾ-2 ಮತ್ತು ಚಾಸಾ-4 ರವರು ಹಾಗೂ ಪೊಲೀಸ್ ಸಿಬ್ಬಂದಿಗಳು ಸಹಿ ಮಾಡಿದ್ದೇವೆ. ಸಾಕ್ಷಿಗೆ ದಾಳಿ ಪೂರ್ವದ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ನಿಪಿ-4 ರ ಕಾಲಕ್ಕೆ ಫೋಟೋ ತೆಗೆಯಲಾಗಿದೆ. ಸಾಕ್ಷಿಗೆ ಫೋಟೋ ತೋರಿಸಲಾಗಿ ಅದನ್ನ

ನೋಡಿ ಗುರುತಿಸಿದ್ದಾರೆ, ಅದನ್ನ ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ. ನಿಪಿ-5 ರಲ್ಲಿ ಕಾಣುವ ಜಾಗ ನಗರ ಪೊಲೀಸ್ ಠಾಣಾ ಆವರಣ ಆಗಿದ್ದು ಅದರಲ್ಲಿ ನಾನು, ಚಾಸಾ-2, 3 ಮತ್ತು ಪೊಲೀಸ್ ಸಿಬ್ಬಂದಿಗಳು ಇದ್ದೇವೆ. ಆನಂತರ ನಾವು ಪೊಲೀಸ್ ಜೀಪ್ ಗಳಲ್ಲಿ ಎ.ಐ.ಟಿ ಕಾಲೇಜಿನ ಬಾಯ್ಸ್ ಹಾಸ್ಟೇಲ್ ಗೇಟ್ ಬಳಿ ಸಂಜೆಃ 05.10 ಗಂಟೆಗೆ ಕರೆದುಕೊಂಡು ಹೋದರು. ನಾವು ಘಟನಾ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿ ನಿಂತುಕೊಂಡು ನೋಡಲಾಗಿ ಅಲ್ಲಿ ಸಿಲ್ವರ್ ಬಣ್ಣದ ಒಂದು ಇಂಡಿಕಾ ಕಾರ್ ನಿಂತಿತ್ತು. ಸದರಿ ಕಾರಿನ ಮೇಲೆ ಪೊಲೀಸರು ನಮ್ಮ ಸಮಕ್ಷಮದಲ್ಲಿ ದಾಳಿ ಮಾಡಿದರು. ದಾಳಿ ಕಾಲಕ್ಕೆ ಇಂಡಿಕಾ ಕಾರ್ ನಲ್ಲಿ ಒಟ್ಟು 4 ಜನ ಇದ್ದರು. ಅದರಲ್ಲಿ 3 ಜನ ತಪ್ಪಿಸಿಕೊಂಡು ಓಡಿ ಹೋದರು. ಅವರನ್ನ ಹಿಡಿಯಲು ಪ್ರಯತ್ನಿಸಿದೆವು ಸದರಿಯವರು ಸಿಗಲಿಲ್ಲ, ಇನ್ನೊಬ್ಬರಿನ್ನ ಪೊಲೀಸರು ಹಿಡಿದರು. ಹಿಡಿದ ಆಸಾಮಿ ಹೆಸರನ್ನ ಕೇಳಲಾಗಿ ಆತನ ಹೆಸರು ಮುಬಾರಕ್ ಎಂದು ತಿಳಿಯಿತು. ಆತನೇ ಓಡಿ ಹೋದವರ ಹೆಸರನ್ನೂ ಸಹ ಹೇಳಿದ್ದು ಈಗ ಅವರ ಹೆಸರು ನೆನಪಿಲ್ಲ. ಇಂಡಿಕಾ ಕಾರಿನ ನೊಂದಣಿ ಸಂಖ್ಯೆಃಕೆಎ-18/ಪಿ-5155 ಆಗಿತ್ತು. ಕಾರನ್ನ ನಮ್ಮ ಸಮಕ್ಷಮದಲ್ಲಿ ಪರಿಶೀಲನೆ ಮಾಡಲಾಗಿ ಹಿಂದಿನ ಶೀಟ್ ನಲ್ಲಿ 2 ಪ್ಲಾಸ್ಟೀಕ್ ಕವರ್ ಗಳು ಇದ್ದವು. ಆ ಎರಡೂ ಪ್ಲಾಸ್ಟೀಕ್ ಕವರ್ ಗಳ ಪೈಕಿ ಒಂದು ಬಿಳಿಯ ಬಣ್ಣದ್ದು ಮತ್ತು ಮತ್ತೊಂದು ಕೆಂಪು ಬಣ್ಣದ್ದು ಆಗಿತ್ತು. ಸದರಿ ಕವರ್ ಗಳಲ್ಲಿ ಏನು ಇದೆ ಎಂದು ಮುಬಾರಕ್ ಈತನ ಬಳಿ ಕೇಳಲಾಗಿ ಅದು ಗಾಂಜಾ ಎಂದು ತಿಳಿಸಿದ. ಆತ ತಾನು ಕಾರ್ ನಲ್ಲಿ ಚಾಲಕನಾಗಿ ಬಂದಿದ್ದು ತನಗೂ ಮತ್ತು ಗಾಂಜಾಕ್ಕೂ ಯಾವುದೇ ಸಂಬಂಧ ಇಲ್ಲ, ಓಡಿ

ಹೋದವರು ಅದನ್ನ ತಂದಿರುವುದಾಗಿ ತಿಳಿಸಿದ. ದೊರೆತ ಮಾಲನ್ನ ತೂಕ ಮಾಡಲಾಗಿ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲದಲ್ಲಿ 390 ಗ್ರಾಂ ಗಾಂಜಾ ಇತ್ತು ಹಾಗೂ ಕೆಂಪುಬಣ್ಣದ ಗಾಂಜಾ ಬ್ಯಾಗ್ ನಲ್ಲಿ 330 ಗ್ರಾಂ ಗಾಂಜಾ ಇತ್ತು. ಒಟ್ಟು 720 ಗ್ರಾಂ ಗಾಂಜಾ ಇತ್ತು. ದೊರೆತ ಮಾಲನ್ನ ಪೊಲೀಸರು ಪ್ಯಾಕ್ ಮಾಡಿ ಸಂಜೆಃ05.10 ರಿಂದ 06.30 ರವರೆಗೆ ಮಹಜರ್ ಬರೆದು ದೊರೆತ ಗಾಂಜಾ ಮತ್ತು ಕಾರನ್ನ ಅಮಾನತ್ತುಪಡಿಸಿಕೊಂಡಿರುತ್ತಾರೆ. ನನ್ನ, ಚಾಸಾ-2 ಮತ್ತು 3 ರವರ ಸಹಿ ಇರುವ ಚೀಟಿಯನ್ನ ಗಾಂಜಾ ಪ್ಯಾಕೇಟ್ ಮೇಲೆ ಅಂಟಿಸಲಾಯಿತು. ಮಹಜರ್ ಗೆ ನಾನು, ಚಾಸಾ-2, 4 ಮತ್ತು ಪೊಲೀಸ್ ಸಿಬ್ಬಂದಿಗಳು ಸಹಿ ಮಾಡಿದ್ದೇವೆ. ಮಹಜರ್ ಕಾಲಕ್ಕೆ ಫೋಟೋ ತೆಗೆಯಲಾಗಿದೆ. ಸಾಕ್ಷಿಗೆ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಫೋಟೋಗಳನ್ನ ತೋರಿಸಲಾಗಿ ಅವುಗಳನ್ನ ನೋಡಿ ಗುರುತಿಸಿದ್ದಾರೆ. ಅವುಗಳನ್ನ ಈಗಾಗಲೇ ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಗಿದೆ. ನಿಪಿ-8 ರಲ್ಲಿ ಕಾಣುವ ಜಾಗ ಘಟನಾ ಸ್ಥಳ ಆಗಿದ್ದು ಅದರಲ್ಲಿ ನಾನು, ಚಾಸಾ-2, 4 ಮತ್ತು ಪೊಲೀಸ್ ಸಿಬ್ಬಂದಿಗಳು ಇದ್ದೇವೆ. ನಿಪಿ-8 ಮತ್ತು ನಿಪಿ-9 ರಲ್ಲಿ ಮುಬಾರಕ್ ಈತ ಇದ್ದು ಅದರಲ್ಲಿ ಕಾರು ಮತ್ತು ಅಮಾನತ್ತುಪಡಿಸಿದ ಮಾಲೂ ಸಹ ಇದೆ. ಆರೋಪಿತರನ್ನ ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಸಾಕ್ಷಿ ಆರೋಪಿತರನ್ನ ಗುರುತಿಸಲು ತಕರಾರು ಇಲ್ಲ ಎಂದು

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ. ಮಾಲು ನ್ಯಾಯಾಲಯದ ಮುಂದೆ ಇದ್ದು ಅದನ್ನ ನೋಡಿ ಗುರುತಿಸಿದ್ದೇನೆ. ಅದನ್ನ ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ 5 ನೇ ಆರೋಪಿ ಪರಃ ಶ್ರೀ ಎಸ್.ಆರ್.ಎಂ. ವಕೀಲರಿಂದಃ-</u>

ನ್ಯಾಯಾಲಯಕ್ಕೆ ಬರುವಂತೆ ನನಗೆ ಸಮನ್ಸ್ ಬಂದಿತ್ತು. ನನಗೆ ಈಗ್ಗೆ 2 ರಿಂದ 3 ದಿನಗಳ ಹಿಂದೆ ಸಮನ್ಸ್ ಜಾರಿಯಾಗಿದೆ. ಸದರಿ ಸಮನ್ಸ್ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ನಾನು ಅದನ್ನ ಕಛೇರಿಗೆ ಕೊಟ್ಟು ಬಂದಿದ್ದೇನೆ, ಬೇಕಾದರೆ ಹಾಜರು ಮಾಡುತ್ತೇನೆ ಎನ್ನುತ್ತಾರೆ. ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬರುವಾಗ ನಮ್ಮ ಪ್ರಾಂಶುಪಾಲರ ಅನುಮತಿ ಪಡೆದು ಬಂದಿದ್ದೇನೆ. ನಾನು ಈ ಸಂಬಂಧ ಪ್ರಾಂಶುಪಾಲರಿಂದ ಲಿಖಿತ ಅನುಮತಿ ಪಡೆದಿದ್ದೇನೆ. ದಿಃ16.09.2019 ರಂದು ಠಾಣೆಗೆ ಬರುವಂತೆ ಪ್ರಾಂಶುಪಾಲರಿಗೆ ಪೊಲೀಸರು ಫೋನ್ ಮುಖಾಂತರ ತಿಳಿಸಿದರು. ಯಾವ ಪೊಲೀಸರು ಚಾಸಾ-2 ರವರಿಗೆ ಫೋನ್ ಮಾಡಿದ್ದರು ಎಂದರೆ ಸಾಕ್ಷಿ ಪೊಲೀಸ್ ನಿರೀಕ್ಷಕರಾದ ಸಲೀಂ ಅಬ್ಬಾಸ್ ರವರು ಫೋನ್ ಮಾಡಿದ್ದರು ಎನ್ನುತ್ತಾರೆ. ಪೊಲೀಸರು ಚಾಸಾ-2 ರವರ ಮೊಬೈಲ್ ಗೆ ಫೋನ್ ಕರೆ ಮಾಡಿ ಬರುವಂತೆ ಹೇಳಿಕೊಂಡಿದ್ದರು. ಚಾಸಾ-2 ರವರ ಖಾಸಗಿ ಮೊಬೈಲ್ ನಂಬರ್ ಚಾಸಾ-1 ರವರ ಬಳಿ ಇತ್ತಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು, ಚಾಸಾ-2 ಮತ್ತು ಚಾಸಾ-4 ರವರು ಠಾಣೆಗೆ ಹೋದಾಗ ಮಧ್ಯಾಹ್ನಃ03.30 ಗಂಟೆ ಆಗಿತ್ತು. ಚಾಸಾ-2 ರವರು ಅಂಗಶೋಧನೆ ಮತ್ತು ಜೇಪ್

ಶೋಧನೆಯನ್ನ ಠಾಣಾ ಆವರಣದಲ್ಲಿ ನಡೆಸಿದರು. ಯಾರ ಯಾರ ಅಂಗಶೋಧನೆಯನ್ನ ಸದರಿಯವರು ಮಾಡಿದರು ಎಂದರೆ ಸಾಕ್ಷಿ ಸಿಬ್ಬಂದಿಗಳ ಅಂಗಶೋಧನೆ ಮಾಡಿದರು ಎನ್ನುತ್ತಾರೆ. ನನ್ನ ಹಾಗೂ ಚಾಸಾ-2 ಹಾಗೂ ಚಾಸಾ-4 ರವರ ಅಂಗಶೋಧನೆಯನ್ನೂ ಸಹ ಆ ಕಾಲಕ್ಕೆ ಮಾಡಲಾಯಿತು. ನಮ್ಮ ಅಂಗಶೋಧನೆಯನ್ನ ಪೊಲೀಸರ ಸಮಕ್ಷಮದಲ್ಲಿ ನಾವೇ ಮಾಡಿಕೊಂಡೆವು. ದಾಳಿ ಪೂರ್ವ ಮಹಜರ್ ಅನ್ನ ಪೊಲೀಸ್ ಠಾಣೆ ಆವರಣದಲ್ಲಿಯೇ 04.30 ರಿಂದ 04.45 ರವರೆಗೆ ಮಾಡಲಾಯಿತು. ಪೊಲೀಸ್ ಜೀಪ್ ಗಳನ್ನ ಸದರಿ ಮಹಜರ್ ಕಾಲಕ್ಕೆ ಶೋಧನೆ ಮಾಡಲಾಯಿತು. ಯಾವ ಯಾವ ಸಂಖ್ಯೆಯ ವಾಹನಗಳನ್ನ ಪರಿಶೀಲನೆ ಮಾಡಲಾಯಿತು ಎಂದರೆ ಸಾಕ್ಷಿ ಕೆಎ-18/ಜಿ-1011 ಮತ್ತು ಕೆಎ-18/ಜಿ-1075 ರ ವಾಹನಗಳನ್ನ ತಪಾಸಣೆ ಮಾಡಲಾಯಿತು ಎನ್ನುತ್ತಾರೆ. ನಿಪಿ-4 ರ ಮಹಜರ್ ಅನ್ನ ಪೊಲೀಸರು ಬರೆದರು. ಅದನ್ನ ಬರೆದವರ ಹೆಸರು ಈಗ ನೆನಪಿಲ್ಲ. ಪೊಲೀಸರ ಹೊರತಾಗಿ ಚಾಸಾ-2 ರವರು ಮಹಜರ್ ಬರೆದರಾ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎನ್ನುತ್ತಾರೆ. ನಿಪಿ-4 ರ ಮಹಜರ್ ಗೆ ನಾನು, ಚಾಸಾ-2 ಮತ್ತು ಚಾಸಾ-4 ರವರು ಸಹಿ ಮಾಡಿದ್ದೇವೆ. ಸದರಿ ಮಹಜರ್ ಮೇಲೆ ಪೊಲೀಸರು ಸಿಬ್ಬಂದಿಗಳು ಯಾರು ಯಾರು ಸಹಿ ಮಾಡಿದ್ದಾರೆ ಎಂದು ನೆನಪಿಲ್ಲ. ಕೆಎ-18/ಜಿ-1075 ರ ವಾಹನ ಬಿಳಿ ಬಣ್ಣದ್ದಾಗಿದ್ದು ಮತ್ತೊಂದು ಜೀಪು ನೀಲಿ ಬಣ್ಣದ್ದಾಗಿತ್ತು. ನಾವು ಹೊರಟಾಗ ತೂಕದ ಯಂತ್ರ ಜೀಪ್ ನಲ್ಲಿ ಇತ್ತು. ಯಾವ ನಂಬರ್ ನ ಜೀಪ್ ನಲ್ಲಿ ಅದನ್ನ ಇಡಲಾಗಿತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಾನು ಕೆಎ-18/ಜಿ-1011 ರ ವಾಹನದಲ್ಲಿ ಸ್ಥಳಕ್ಕೆ

ಹೋದೆವು. ಚಾಸಾ-2 ರವರು ಮತ್ತೊಂದು ವಾಹನದಲ್ಲಿ ಬಂದರು. ಚಾಸಾ-4 ರವರು ನಾನು ಹೊರಟಿದ್ದ ಜೀಪ್ ನಲ್ಲಿ ಬಂದರು. ಘಟನಾ ಸ್ಥಳಕ್ಕೆ ಸಂಜೆಃ05.10 ಗಂಟೆಗೆ ಹೋದೆವು. ಸುಮಾರು 10 ನಿಮಿಷಗಳ ಕಾಲ ಟಾಟಾ ಇಂಡಿಕಾ ಕಾರ್ ನ ಬಳಿ ನಡೆಯುತ್ತಿದ್ದ ಚಟುವಟಿಕೆಗಳನ್ನ ಗಮನಿಸಿದೆವು. ನಾವು ಎ.ಐ.ಟಿ ಕಾಲೇಜ್ ಬಾಯ್ಸ್ ಹಾಸ್ಟೇಲ್ ಗೇಟ್ ಬಳಿ ನಿಂತು ವೀಕ್ಷಣೆ ಮಾಡಿದೆವು. 4 ಜನ ಆರೋಪಿತರು ಕಾರಿನ ಯಾವ ಯಾವ ಬದಿಯಲ್ಲಿ ಇದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಆರೋಪಿತರನ್ನ ಪೊಲೀಸರು ಹಿಡಿಯಲು ಹೋದಾಗ ನಾವು ಅವರ ಹಿಂದೆಯೇ ಇದ್ದೆವು. ಹಿಡಿದ ಆರೋಪಿಯನ್ನ ಪೊಲೀಸ್ ಸಿಬ್ಬಂದಿಗಳು ಹಿಡಿದರು. ಹಿಡಿದ ಆರೋಪಿ ಕಾರಿನ ಬಲಭಾಗದಲ್ಲಿ ಇಳಿದು ಓಡಿ ಹೋಗಲು ಪ್ರಯತ್ನಪಟ್ಟ. ಮುಬಾರಕ್ ಈತ ಕಾರಿನ ಮುಂಭಾಗದ ಬಲಬದಿ ಚಾಲಕನ ಸೀಟ್ ನಲ್ಲಿ ಇದ್ದ. ಕಾರನ್ನ ಯಾರು ಪರಿಶೀಲನೆ ಮಾಡಿದರು ಎಂದರೆ ಸಾಕ್ಷಿ ಪೊಲೀಸರ ಜೊತೆ ನಾವೂ ಸಹ ಇದ್ದೆವು ಎನ್ನುತ್ತಾರೆ. ಕಾರಿನ ಹಿಂಭಾಗ ಬಲಬದಿಯಲ್ಲಿ ಮಾಲು ಇದ್ದವು. ಪರಿಶೀಲನೆ ಮಾಡಿದ ಕಾಲಕ್ಕೆ ಕಾರಿನ ಕೀ ಕಾರಿನಲ್ಲಿಯೇ ಇತ್ತಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಪಿ-9 ರಲ್ಲಿ ಒಂದು ಬಿಳಿ ಚೀಲ ಮಾತ್ರ ಕಾಣಿಸುತ್ತಿದೆ ಎಂದರೆ ಸಾಕ್ಷಿ ಬಿಳಿ ಚೀಲ ಒಳಗಡೆಯೇ ಎರೆಡೂ ಕವರ್ ಗಳು ಇದ್ದವು ಎನ್ನುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮಾಲುಗಳಲ್ಲಿ ಕೆಂಪುಬಣ್ಣದ ಚೀಲ ಇಲ್ಲ ಎಂದರೆ ಸಾಕ್ಷಿ ನಾವು ನೋಡಿದಾಗ ಕೆಂಪುಬಣ್ಣದ ಚೀಲ ಇತ್ತು ಎನ್ನುತ್ತಾರೆ. ಮಹಜರ್ ಅನ್ನ 05.30 ರಿಂದ ಬರೆಯಲು ಪ್ರಾರಂಭಿಸಲಾಯಿತು, ನಿಕರ ಸಮಯ ಈಗ ನೆನಪಿಲ್ಲ ಎನ್ನುತ್ತಾರೆ. ಮಹಜರ್

ಬರೆದ ಕಾಲಕ್ಕೆ ಸ್ಥಳೀಯರು ಯಾರೂ ಓಡಾಡುತ್ತಿರಲಿಲ್ಲವಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಆ ಕಾಲಕ್ಕೆ ಕಾಲೇಜು ವಿದ್ಯಾರ್ಥಿಗಳು ಕಾಲೇಜಿನಿಂದ ಹಾಸ್ಟೇಲ್ ಗೆ ಹೋಗುತ್ತಿದ್ದರಾ ಎಂದರೆ ಸಾಕ್ಷಿ ಅಲ್ಲಿ ಯಾರೂ ಓಡಾಡುತ್ತಿರಲಿಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದ ಸ್ಥಳ ಸಾರ್ವಜನಿಕ ರಸ್ತೆ ಎಂದರೆ ಸಾಕ್ಷಿ ಅಲ್ಲಿ ಅಷ್ಟೊಂದು ಜನ ಓಡಾಡುವುದಿಲ್ಲ ಎನ್ನುತ್ತಾರೆ. ನಿಪಿ-7 ರ ಮಹಜರ್ ಅನ್ನ ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಿಪಿ-7 ರ ಮೇಲೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು, ಚಾಸಾ-2, 4 ಸಹಿ ಮಾಡಿದ್ದೇವೆ, ಉಳಿದ ಪೊಲೀಸರು ಯಾರ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ. ಆರೋಪಿತರು ಆ ದಿನ ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ. ಪೊಲೀಸರು ಚಾಸಾ-2 ರವರಿಗೆ ಫೋನ್ ಮಾಡಿದ್ದರು, ಅವರ ಸಮುಖದಲ್ಲಿ ನಾವು ಠಾಣೆಗೆ ಹೋದೆವು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ದಾವಾ ಪೂರ್ವ ಮಹಜರ್ ಬರೆಯಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನಲಾದ ಸ್ಥಳದಲ್ಲಿ ಬರೆಯಿತು ಎನ್ನಲಾದ ಮಹಜರ್ ಅನ್ನ ಚೆಕ್ಕುಬಂಧಿ ಹೇಳುತ್ತೀರಾ ಎಂದರೆ ಸಾಕ್ಷಿ ಪೂರ್ವಕ್ಕೆ ಪ್ರಕಾಶ್ ಲೇಔಟ್, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಬೀಕನಹಳ್ಳಿ ರಸ್ತೆ ಹಾಗೂ ದಕ್ಷಿಣಕ್ಕೆ ಎ.ಐ.ಟಿ ಸರ್ಕಲ್ ಗೆ ಹೋಗುವ ರಸ್ತೆ ಎನ್ನುತ್ತಾರೆ. ಪೊಲೀಸರು ಹೇಳಿಕೊಟ್ಟಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನಾನು ಮತ್ತು ಇತರರು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ

ಯಾವುದೇ ಆರೋಪಿತರು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಮಾಲನ್ನ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಮಾಲನ್ನ ಅಮಾನತ್ತುಪಡಿಸಿಲ್ಲ ಮತ್ತು ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನ ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಗಳ ಮೇಲೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.ಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಉಳಿದ ಆರೋಪಿ ಪರಃ ವಕೀಲರಿಂದಃ-</u>

5 ನೇ ಆರೋಪಿತರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನ ಅಳವಡಿಸಿಕೊಂಡಿರುತ್ತಾರೆ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

C.C.No.1245/2021
PW-3 CW-3

ಎಸ್‌ಆರ್‌ಃ